ನಮಾಝ್‌ನಲ್ಲಿ ಭಯ-ಭಕ್ತಿ

ನಮಾಝ್ ಎಂದರೆ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗುವುದಾಗಿದೆ. ಓರ್ವ ನೈಜ ವಿಶ್ವಾಸಿಯು ತನ್ನ ಪ್ರಭುವಿನ ಸನ್ನಿಧಿಯಲ್ಲಿ ನಿಲ್ಲುವಾಗ, ನಿಸ್ಸಂಶಯವಾಗಿಯೂ ದೇವನ ಪ್ರತಾಪವನ್ನು ನೆನೆದು ಅವನ ಹೃದಯವು ಕಂಪಿಸುತ್ತದೆ. ಗೌರವದಿಂದ ಸಂಪೂರ್ಣ ಸ್ತಬ್ಧವಾಗಿ, ತನ್ನ ತಪ್ಪುಗಳನ್ನು ನೆನೆದು ಅವನ ಕಣ್ಣುಗಳೂ ತೇವಗೊಳ್ಳುತ್ತವೆ. ವಿನಯತೆಯು ಸ್ವಯಂ ತನ್ನನ್ನೇ ಮರೆಯುವಷ್ಟಿರುತ್ತದೆ. ನಮಾಝ್‌ನ ಸಮಯವಾಗುತ್ತಲೇ ಅಮೀರುಲ್ ಮೂಮಿನೀನ್ ಅಲೀಯವರ(ರ) ಮುಖವರ್ಣವೇ ಬದಲಾಗುತ್ತಿತ್ತು. ಅವರೊಡನೆ ಅದಕ್ಕೆ ಕಾರಣವೇನೆಂದು ಒಮ್ಮೆ ಕೇಳಿದಾಗ ಅವರು ಹೀಗೆಂದರು, "ಈ ಸಮಯದಲ್ಲಿ ನನಗೆ ಭೂಮಿ, ಆಕಾಶಗಳು ಮತ್ತು ಪರ್ವತಗಳು ವಹಿಸಲು ನಿರಾಕರಿಸಿದ ಹಾಗೂ ನನ್ನಂತಹ ದುರ್ಬಲರು ವಹಿಸಿದ ಆ ಹೊಣೆಭಾರವು ನೆನಪಾಗುತ್ತದೆ. ಈ ಅವಸ್ಥೆಯು ಅಮಾನತ್‌ನ ಹೊರೆಯನ್ನು ಎತ್ತುವುದರಿಂದ ಹುಟ್ಟುತ್ತದೆ."

ಪ್ರಖ್ಯಾತ ತಾಬಈ ಹಾತಿಮ್ ಅಲ್ ಅಸಿಮ್‌ರೊಡನೆ ಅವರ ನಮಾಝ್‌ನ ಕುರಿತು ಕೇಳಲಾದಾಗ, ಅವರು ಹೀಗೆಂದರು, "ನಮಾಝ್‌ನ ಸಮಯವಾದೊಡನೆ ನಾನು ಚೆನ್ನಾಗಿ ವುಝೂ ಮಾಡುತ್ತೇನೆ ಮತ್ತು ನಮಾಝ್ ನಿರ್ವಹಿಸಲಿಕ್ಕಿರುವ ಕಡೆಗೆ ಹೋಗುತ್ತೇನೆ. ನಾನು ಅಲ್ಲಿ ಕುಳಿತುಕೊಳ್ಳುತ್ತೇನೆ. ನನ್ನ ಅಂಗಾಂಗಗಳು ನಮಾಝ್‌ಗಾಗಿ ಸಿದ್ಧವಾದೊಡನೆ ನಮಾಝ್‌ಗಾಗಿ ಎದ್ದು ನಿಲ್ಲುತ್ತೇನೆ. ಆ ಹೊತ್ತು ನನ್ನ ದೃಷ್ಟಿಯ ಮುಂದೆ ಕಅಬಾ ಭವನವಿರುತ್ತದೆ ಮತ್ತು ನಾನು ಸಿರಾತ್ ಸೇತುವೆಯಲ್ಲಿ ನಿಂತಿರುವಂತೆ ಕಲ್ಪಿಸುತ್ತೇನೆ. ಸ್ವರ್ಗವು ನನ್ನ ಬಲಗಡೆ ಮತ್ತು ನರಕವು ನನ್ನ ಎಡಗಡೆ ಇದೆಯೆಂದೂ ಮಲಕುಲ್ ಮೌತ್ ನನ್ನ ಹಿಂದಿದ್ದಾರೆಂದೂ ಅದು ನನ್ನ ಕೊನೆಯ ನಮಾಝ್ ಆಗಿದೆಯೆಂದೂ ಭಾವಿಸುತ್ತೇನೆ. ನಿರೀಕ್ಷೆ ಮತ್ತು ಭಯದ ಸ್ಥಿತಿಯಲ್ಲಿ ನಿಲ್ಲುತ್ತೇನೆ. ಹೀಗೆ ಅಲ್ಲಾಹನ ಘನತೆ ಮತ್ತು ಪ್ರತಾಪವನ್ನು ಮನದಲ್ಲಿ ತಂದುಕೊಂಡು ಮಾಡಿ ಅಲ್ಲಾಹು ಅಕ್ಬರ್ ಎನ್ನುತ್ತೇನೆ. ತರ್ತೀಲ್‌ನೊಂದಿಗೆ ಕುರ್‌ಆನ್ ಪಠಿಸುತ್ತೇನೆ ಮತ್ತು ವಿನಯಪೂರ್ವಕವಾಗಿ ರಕೂಅ್‌ಗೆ ಬಾಗುತ್ತೇನೆ. ಬಳಿಕ ಅತ್ಯಂತ ಭಯ-ಭಕ್ತಿಯೊಂದಿಗೆ ಸಜ್ದ ಮಾಡುತ್ತೇನೆ. ಎಡಗಾಲ ಪಾದದ ಮೇಲೆ ಕುಳಿತುಕೊಳ್ಳುತ್ತೇನೆ ಮತ್ತು ಬಲಗಾಲನ್ನು ಹೆಬ್ಬೆಟ್ಟಿನ ಆಧಾರದಲ್ಲಿ ನಿಲ್ಲಿಸುತ್ತೇನೆ. ನಮಾಝನ್ನು ಕೇವಲ ಅಲ್ಲಾಹನಿಗಾಗಿ ನಿಷ್ಕಳಂಕತೆಯೊಂದಿಗೆ ನಿರ್ವಹಿಸುತ್ತೇನೆ. ಅದು ಸ್ವೀಕಾರಾರ್ಹವೆನಿಸುವುದೋ ಇಲ್ಲವೋ ಎಂಬುದು ಮಾತ್ರ ನನಗೆ ತಿಳಿದಿಲ್ಲ."

* * * * *

www.uzairrahi.com